ಮಕ್ಕಳಿಗಾಗಿ ಬೈಬಲ್

ಅರ್ಪಿಸುವ



# ಬೆಂಕಿಯುಳ್ಳ ಮನುಷ್ಯ.

ಬರಹಗಾರರು: Edward Hughes

ಚಿತ್ರಲೇಖಕರು: Lazarus

ಅಳವಡಿಸುವವರು: E. Frischbutter

ಪದ್ಮಾ ಸೈಲೇಸ್: Vinay Shirol

ತಯಾರಕರು: Bible for Children
www.M1914.org

©2017 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.

ಎಲ್ಲವು ಇಸ್ರೇಯೇಲರಿಗೆ ಆಶುಭವಾಗಿ ಮಾರ್ಪಟ್ಟಿತು, ರಾಜನು ರಾಣಿಯರು ದೇವರನ್ನು ತಿರಸ್ಕಾರಮಾಡುವಂತ ಪರಿಸ್ಥಿತಿ ಬಂತು, ...



... ಅಷ್ಟೆ ಅಲ್ಲದೆ ಜನರು ಸಹ ದೇವರನ್ನು ತಿರಸ್ಕಾರ ಮಾಡುವಂತ ಪರಿಸ್ಥಿತಿ ಬಂತು, ಆದರೆ ಇಂತ ಪರಿಸ್ಥಿಯಲ್ಲಿ ಯಾರಾದರೂ ದೇವರನ್ನು ಪ್ರೀತಿಸಬಹುದೇ?



ಅಲ್ಲಿ ನಂಬಿಗಸ್ತನಾಗಿ ನಿಜವಾದ ದೇವರನ್ನು ಆರಾಧನೆ ಮಾಡುವಂತ ಒಬ್ಬ ದೇವರ ಮನುಷ್ಯನಿದ್ದನು ಅವನು ಎಲಿಯನು.



ಆಗ ಎಲಿಯನು ಅಲ್ಲಿರುವ
ಆ ದುಷ್ಟ ರಾಜನಾದ
ಆಹಾಬನಿಗೆ
ಹೇಳಿದ್ದೆನೆಂದರೆ,
ಜನರು ಬಹಳವಾಗಿ
ದೇವರಿಗೆ ಅವಿದೇಯರಾಗಿ
ನಡೆಯುವುದರಿಂದ
ಕೆಲವು ವರ್ಷಗಳು
ಭೂಮಿಯ ಮೇಲೆ
ಮಂಜಾಗಲಿ ...



... ಮಳೆಯಾಗಲಿ ಆಗುವುದಿಲ್ಲ,
ಮಹಾ ಭಯಂಕರವಾದ
ಬರಗಾಲವುಂಟಾಗುತ್ತದೆ,
ಇಸ್ರೆಯೇಲರ
ದುಷ್ಯಕೃತ್ಯಕ್ಕೆ
ತಕ್ಕಂತೆ ದೇವರು
ಮಾಡುವನು
ಅಂದನು.





ಎಲಿಯನು ರಾಜನನ್ನುಎಚ್ಚರಿದ ನಂತರ ಅವನನ್ನು
ದೇವರು ಒಂದು ಸ್ಥಳಕ್ಕೆ ಕಳುಹಿಸಿದನು.



ಅವನಿಗೆ
ಊಟಕ್ಕೆ ಬೇಕಾದ
ಆಹಾರವನ್ನು
ಕಾಗೆಗಳ
ಮೂಲಕ ಒದಗಿಸಿದನು. ಎಲಿಯನು ಆ ಆಹಾರವನ್ನು
ತಿಂದು ಹಳ್ಳದಲ್ಲಿರುವ ನೀರನ್ನು ಕುಡಿಯುತ್ತಿದ್ದನು.

ಅಲ್ಲಿ
ಮಳೆಯು
ಇಲ್ಲದ
ಕಾರಣದಿಂದ



ಆ ಹಳ್ಳದಲ್ಲಿರುವ ನೀರು ಬತ್ತಿ ಹೋಯಿತು. ದೇಶವೆಲ್ಲ ಬರಗಾಲದಲ್ಲಿ ತತ್ತರಿಸಿ ಹೋಗುತ್ತಿದೆ. ಯಾವ ತರವಾದ ಬೆಳೆಯು ಅಲ್ಲಿ ಬೆಳೆಯುವುದಕ್ಕೆ ಆಗಲಿಲ್ಲ.



ಎಲ್ಲಾ ಜನರು ಹಸಿವೆಯಿಂದ ಬಳಲುತ್ತಿದ್ದಾರೆ, ಆಗ ನೀರು ಬತ್ತಿದ್ದರಿಂದ ತನಗೆ ಏನಾಗುತ್ತದೆಯೋ ಎಂದು ಎಲಿಯನು ಅಂದುಕೊಳ್ಳುತ್ತಿದ್ದನು.

ದೇವರು ಎಲಿಯನಿಗೆ ನೀನು ಎದ್ದು ಚಾರೆಪ್ತ
ಊರಿಗೆ ಹೋಗು
ಅಲ್ಲಿ ಒಂದು ವಿದವೆಗೆ
ನಿನ್ನನ್ನು ಸಾಕುವುದಕ್ಕೆ
ಅಪ್ಪಣೆ ಕೊಟ್ಟಿದ್ದೆನೆ
ಅಂದನು. ದೇವರಿಗೆ



ಅವನ ಸೇವಕರ
ಅವಶ್ಯಕತೆಯು ...

... ತಿಳಿದಿರುತ್ತದೆ ಆದರೆ ದೇವರು ಆಶ್ಚರ್ಯಕರವಾದ ರೀತಿಯಲ್ಲಿ ಅದನ್ನು ಒದಗಿಸುವವನಾಗಿದ್ದಾನೆ. ಎಲಿಯನು ದೇವರ ಮಾತಿಗೆ ತಗ್ಗಿಸಿಕೊಂಡು ಚಾರೆಪ್ತ ಊರಿನ ಹತ್ತಿರ



ಹೋಗುವಾಗ ಒಂದು ವಿದವೆಯು ಕಟ್ಟಿಗೆಯನ್ನು ಅರಿಸುತ್ತಿದ್ದಳು.

ಎಲಿಯನು ಬಂದು
ಅವಳಿಗೆ ನೀನು ಹೋಗಿ
ನನಗೆ ಒಂದು ಲೋಟ
ನೀರು ಮತ್ತು ಒಂದು
ತುಂಡು ರೊಟ್ಟಿಯನ್ನು
ತಗೆದುಕೊಂಡು

ಬಾ ಎಂದು ಅವಳಿಗೆ
ಹೇಳಿದಾಗ, ಅವಳು
ನನ್ನ ಹತ್ತಿರ
ಅದು ಇಲ್ಲಾ, ...



... ಒಂದು ಹಿಡಿ ಹಿಟ್ಟು
ಮತ್ತು ಮೊಗೆಯಲ್ಲಿ
ಸಲ್ಪ ಎಣ್ಣೆ ಇದೆ
ಅಂದಳು. ಆಗ
ಆ ವಿದವೆಯು
ದುಖ:ದಿಂದ,

ಇದು ಮುಗಿದ ಮೇಲೆ
ನಾನು ನನ್ನ ಮಗನು
ಸಾಯಲೇ ಬೇಕು
ಅಂದಳು.



ಎಲಿಯನು ಅವಳಿಗೆ ಭಯ ಪಡಬೇಡ ಮೊದಲು ಹೋಗಿ ನನಗೆ ಒಂದು ರೊಟ್ಟಿಯನ್ನು ಮಾಡಿಕೊಂಡು ಬಾ ನಂತರ ನೀನು ನಿನ್ನ ಮಗನು ಮಾಡಿ ತಿನ್ನಿರಿ ಅಂದನು. ದೇವರು ಭೂಮಿಗೆ ಮಳೆಯನ್ನು ಕಳಿಸುವ ತನಕ ನಿನ್ನಲ್ಲಿರುವ ಒಂದು ಹಿಡಿ ಹಿಟ್ಟು ಮತ್ತು ಮೊಗೆಯಲ್ಲಿರುವ ಎಣ್ಣೆಯು ತೀರುವುದಿಲ್ಲ ಅಂದನು.



ಎಲಿಯನು ಇರುವ ಮನೆಯಲ್ಲಿರುವಂತ ಆ ಸಣ್ಣ ಹುಡಗನು ಸತ್ತು ಹೋದನು. ಅವನನ್ನು ಎಲಿಯನು ತನ್ನ ಮೇಲಿನ ಕೋಣೆಗೆ ತಗೆದುಕೊಂಡು ಹೋಗಿ ಅವನಿಗಾಗಿ ಕರ್ತನಲ್ಲಿ ಅತ್ತು ...



... ದೇವರೆ ಈತನ ಪ್ರಾಣವು ತಿರುಗಿ ಬರಲಿ ಎಂದು ಪ್ರಾರ್ಥಿಸಿದನು. ಆಹಾ. ಎಂತಾ ಆಸಾಧ್ಯವಾದ ಪ್ರಾರ್ಥನೆಯಾಗಿದೆ?



ಆಗ ಅತನ ಪ್ರಾಣವು ತಿರುಗಿ ಬಂದು ಆ ಹುಡುಗನು ಬದುಕಿದನು. ಅವನನ್ನು ತೆಗೆದುಕೊಂಡು ಹೋಗಿ ಅವಳ ಕೈಯಲ್ಲಿ ಕೊಟ್ಟನು. ‘ಹೀಗೆ ಎಲಿಯನ ಬಾಯಿಂದ ಬರುವಂತ ಮಾತು ದೇವರದೇ ಎಂದು ತಿಳಿದು ಬಂತು’. ಎಂದು ಹೇಳಿದಳು.



ಮೂರು ವರ್ಷಗಳ ನಂತರ, ದೇವರು ಮಳೆಯನ್ನು ಕಳಿಸುತ್ತಾನೆಂದು ತಿಳಿಸುವುದಕ್ಕಾಗಿ ಎಲಿಯನು ತಿರುಗಿ ರಾಜನ



ಬಳಿಗೆ ಹೋದನು.

ಅವನ ಹೆಂಡತಿಯಾದ ಈಜೆಬೆಲಳು 100 ದೇವರ ಪ್ರವಾಧಿಗಳನ್ನು ಕೊಂದು ಹಾಕಿದ್ದಳು, ...



... ಎಲಿಯನು ಅವಳ ಹತ್ತಿರ ಹೋಗದೆ ನೇರವಾಗಿ ರಾಜನಾದ ಆಹಾಬನ ಹತ್ತಿರವೇ ಹೋದನು.



ಎಲಿಯನು ಆಹಾಬನಿಗೆ
ಸವಾಲಾಗಿ ಹೇಳಿದ್ದೆನೆಂದರೆ,
ನೀನು ಕರ್ಮೆಲ್‌ಬೆಟ್ಟದಲ್ಲಿ
ಇಸ್ರೆಯೇಲರಲ್ಲಿರುವ **850**
ಸುಳ್ಳು ಪ್ರವಾದಿಗಳನ್ನು
ಒಟ್ಟು ಮಾಡು.
ಎಲಿಯನು ಜನರಿಗೆ
ಹೇಳಿದ್ದೆನೆಂದರೆ



ಯಹೋವನು ದೇವರಾಗಿದ್ದರೆ
ಅವನನ್ನು ಹಿಂಬಾಲಿಸಿ ಅಂದನು.

ಎಲಿಯನು ಎರಡು ಯಜ್ಞವೇದಿಯನ್ನು ಮಾಡಿ ಅದರ ಮೇಲೆ ಹೋರಿಗಳನ್ನು ಕಡೆದು ಅವುಗಳ ಮೇಲೆ ಇಟ್ಟನು ಬೆಂಕಿ ಹಚ್ಚಲಿಲ್ಲ.



ಅವರಿಗೆ ಎಲಿಯನು ನೀವು ನಿಮ್ಮ ದೇವರನ್ನು
ಕರೆಯಿರಿ ನಾನು ನನ್ನ ದೇವರನ್ನು ಕರೆಯುವೇನು,
ಯಾವ ದೇವರು ನಮ್ಮ ಪ್ರಾರ್ಥನೆಯನ್ನು ಕೇಳಿ ಬೆಂಕಿಯನ್ನು
ಕಳುಹಿಸುತ್ತಾರೋ ಅವರೇ ನಿಜವಾದ ದೇವರು ಅಂದನು.
ಜನರೆಲ್ಲರೂ ಇದಕ್ಕೆ ಸಮ್ಮತಿಸಿದರು.



ಆ ಸುಳ್ಳು ಪ್ರವಾದಿಗಳು ಮುಂಜಾನೆಯಿಂದ ಸಂಜೆಯ ವರೆಗೂ ತಮ್ಮ ಮೈಯಿಂದ ರಕ್ತ ಬರುವಷ್ಟು ಮಟ್ಟಿಗೆ ಅವರು ತಮ್ಮ ದೇವರನ್ನು ಕೂಗಿದರು ನಾಟ್ಯಮಾಡಿದರು ಏನಲ್ಲಾ ಮಾಡಿದರೂ ಯಾರು ಅವರಿಗೆ ಉತ್ತರ ಕೊಡಲಿಲ್ಲ.

ಬೆಂಕಿಯು ಬರಲಿಲ್ಲ.





ಆಗ ಎಲಿಯನು ಆ ಯಜ್ಞವೇದಿಯನ್ನು ನೀರಿನಿಂದ ತುಂಬಿಸಿ 'ದೇವರೆ ನೀವೇ ನಿಜವಾದ ದೇವರೆಂದು ಇವರು ತಿಳಿದುಕೊಳ್ಳುವಂತೆ ಬೆಂಕಿಯನ್ನು ಸುರಿಸು' ...



... ಎಂದು
ಪ್ರಾರ್ಥಿಸಿದನು,
ಕೂಡಲೆ ಆಕಾಶದಿಂದ
ಬೆಂಕಿ ಬಿದ್ದು
ಅಲ್ಲಿರುವಂತ
ಎಲ್ಲವನ್ನು ದಹಿಸಿತು.

ಅದನ್ನು ನೋಡಿದ ಜನರು ಯಹೋವನೇ ನಿಜವಾದ ದೇವರೆಂದು ಆರ್ಭಟಿಸಿದರು, ಆಗ ಎಲಿಯನು ಆ ಸುಳ್ಳು ಪ್ರವಾದಿಗಳನ್ನು ಹಿಡಿಯಿರಿ ಯಾರು ತಪ್ಪಿಸಿಕೊಳ್ಳಬಾರದು ಎಂದು

ಅಪ್ಪಣೆ ಕೊಟ್ಟನು.



ಅಹಾಬನು ದೇವರ ಪ್ರವಾದಿಗಳನ್ನು ಕೊಲ್ಲಿಸಿದ್ದುದರಿಂದ, ಎಲಿಯನು ಆ ಸುಳ್ಳು ಪ್ರವಾದಿಗಳನ್ನು ಕೊಲ್ಲಿಸಿದನು.



ದೇವರ ಸೇವಕನು ಆಹಾಬನಿಗೆ ‘ಅಂಗೈಯಷ್ಟು ಮೋಡವು ಏರಿ ಬರುತ್ತಿದೆ ಈಗ ಮಳೆಯು ಬರುತ್ತದೆ ಎಂದನು.



ಮಹಾ ಭಯಂಕರವಾದ
ಮೂರು ವರ್ಷಗಳ
ಬರಗಾಲದ ನಂತರ ಮತ್ತೆ
ಮಳೆಯು ಬರಬಹುದಾ?





ಕೆಲವು ಕ್ಷಣಗಳಲ್ಲಿ ಮೋಡವು
ಆಕಾಶದಲ್ಲೆಲ್ಲ ತುಂಬಿ
ಗಾಳಿಯಿಂದ ತುಂಬಿದ
ಮಳೆಯು ಆರಂಭವಾಯಿತು.
ದೇವರು ಮಳೆಯನ್ನು
ಕಳಿಸಿದರು ಎಲಿಯನು
ಹೇಳಿದ ಮಾತು ಸತ್ಯವೆಂದು
ಜನರು ತಿಳಿದು ಅವರೇ
ನಿಜವಾದ ದೇವರೆಂದು
ತಿಳಿದುಕೊಂಡರು.

ಅಹಾಬನು ದೇವರನ್ನು ಮತ್ತು ದೇವರ ಸೇವಕನಾದ ಎಲಿಯನನ್ನು ಗೌರವಿಸಿದನೋ? ಇಲ್ಲಾ, ಈಜೆಬೆಲಳು



ಎಲಿಯನನ್ನು ಕೊಲ್ಲಬೇಕೆಂದು ನೋಡಿದಳು ಆದರೆ ಅಹಾಬನು ಯುದ್ಧದಲ್ಲಿ ಸತ್ತನು ಅವನ ಹೆಂಡತಿಯನ್ನು ಅವನ ಸೇವಕರೇ ಮೇಲಿನಿಂದ ಕೆಳಕ್ಕೆ ತಳ್ಳಿದರು ಅವಳು ಬಿದ್ದು ಪುಡಿ ಪುಡಿಯಾಗಿ ಸತ್ತಳು.



ಎಲಿಯನಿಗೆ
ಏನಾಯಿತು ಗೊತ್ತೇ?
ಒಂದು ದಿನ ದೇವರ
ಅಗ್ನೀಯ ಮನುಷ್ಯನಾದ
ಎಲಿಯನು, ...



... ಅಗ್ನಿಮಯವಾದ
ರಥರಥಾಶ್ವಗಳ ನಡುವೆ
ಸುಳಿಗಾಳಿಯ ಮುಖಾಂತರವಾಗಿ
ಎತ್ತಲ್ಪಟ್ಟು ಪರಲೋಕ್ಕೆ
ಹೋದನು.

ಬೆಂಕಿಯುಳ್ಳ ಮನುಷ್ಯ.

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

1 ಅರಸು 17–19, 2 ಅರಸು 2

“ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು.”
ಕೀರ್ತನೆ 119:130

# ಮುಕ್ತಾಯ

ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು
ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು  ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು.
ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ
ದೇವರೊಂದಿಗೆ ಮಾತಾಡು!
ಯೋಹಾನ 3:16